# ಸ್ವಾಮಿ ವಿವೇಕಾನಂದ ಮತ್ತು ಲಿಯೋ ಟಾಲ್‌ಸ್ಟಾಯ್ — ಎರಡು ಸಮಕಾಲೀನ ಚಿಂತನಶಕ್ತಿಗಳು

◆ ಬ್ರಹ್ಮಚಾರಿ ಅಭಯ ಚೈತನ್ಯ

ನಮ್ಮ ಆಲೋಚನೆಗಳು ನಮ್ಮ ವೈಯಕ್ತಿಕ ಜೀವನವನ್ನು ಮಾರ್ಪಡಿಸುವಂತೆ, ಕೆಲವು ಮಹಾನ್ ಚಿಂತಕರ ಚಿಂತನೆಗಳು ರಾಷ್ಟ್ರಗಳ ಅಥವಾ ಸಮಸ್ತ ವಿಶ್ವದ ಜನಜೀವನದ ದಿಕ್ಕನ್ನೇ ಬದಲಿಸಲು ಸಮರ್ಥವಾಗಿರುತ್ತವೆ. ಅಂತಹ ಎರಡು ಚಿಂತನ ಶಕ್ತಿಗಳ ಕೆಲವು ಚಿಂತನೆಗಳ ಸಾಮ್ಯ-ವೈಷಮ್ಯಗಳನ್ನು ಈ ಲೇಖನದಲ್ಲಿ ಚರ್ಚಿಸಿದೆ. ೧೯ನೇ ಶತಮಾನದ ಆದಿಯಲ್ಲಿ ರಷ್ಯಾ ದೇಶದ ಸಾಹಿತ್ಯಕೃಷಿಕರಲ್ಲಿ ಅಪೂರ್ವರೂ, ಪ್ರಮುಖರೂ ಆಗಿರುತ್ತಾರೆ ಲಿಯೋ ನಿಕೋಲೋವಿಚ್ ಟಾಲ್‌ಸ್ಟಾಯ್. ಇವರ ಮೌಲ್ಯಾಧಾರಿತ ಸುಂದರ, ಪುಟ್ಟ ಕಥೆಗಳು ಪ್ರಾಥಮಿಕ ಶಾಲೆಯ ಮಕ್ಕಳಿಗೂ ಪರಿಚಿತ. ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಟಾಲ್‌ಸ್ಟಾಯ್ ತಮ್ಮ ೨೪ನೇ ವಯಸ್ಸಿಗೇ 'ಚೈಲ್ಡ್‌ಹುಡ್' ಎಂಬ ಕೃತಿಯನ್ನು ಪ್ರಕಟಿಸುವುದರ ಮೂಲಕ ಸಾಹಿತ್ಯರಂಗಕ್ಕೆ ಕಾಲಿಟ್ಟರು. ಅಸಂಖ್ಯಾತ ಕೃತಿಗಳನ್ನು ರಚಿಸಿದ ಅವರು ತಮ್ಮ ೮೦ನೆಯ ಇಳಿವಯಸ್ಸಿನವರೆಗೂ ರಷ್ಯನ್ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಚಿರಸ್ಮರಣೀಯವಾಗಿದೆ. ಸ್ವತಃ ತಮ್ಮ ವೈಯಕ್ತಿಕ ಜೀವನದಲ್ಲಿದ್ದ ಹುಳುಕುಗಳನ್ನೇ ನಿರ್ದಾಕ್ಷಿಣ್ಯವಾಗಿ ಬರೆಯುತ್ತಿದ್ದ ಅವರ ಕಟು ಲೇಖನಿಗೆ ರಷ್ಯಾ ಸರ್ಕಾರದಿಂದ ಹಿಡಿದು, ಸಾಂಪ್ರದಾಯಿಕ ಕ್ರೈಸ್ತ ಸಮಾಜದ ಉನ್ನತ ಅಧಿಕಾರಿಗಳ ನಿಯೋಗವೂ ಗುರಿಯಾಗಬೇಕಾಯಿತು. ಅವರನ್ನು ಕ್ರೈಸ್ತ ಸಮಾಜದಿಂದ ಉಚ್ಚಾಟಿಸಲಾಯಿತು. ಆದರೂ, ಸರಿಯೆಂದು ಒಮ್ಮೆ ನಿರ್ಧರಿಸಿ ಸ್ವೀಕರಿಸಿದ ಅವರ ಅಭಿಪ್ರಾಯಗಳು ಅವರ ಮೃತ್ಯುಶಯ್ಯೆಯಲ್ಲೂ ಅವರನ್ನು ಬಿಡದೆ ಅಚಲವಾಗಿ ನಿಂತವು.

ಹತ್ತೊಂಬತ್ತನೇ ಶತಮಾನವು ಕಂಡ ವೈಚಾರಿಕ ಕ್ರಾಂತಿಕಾರರಲ್ಲಿ ಸ್ವಾಮಿ ವಿವೇಕಾನಂದರ ಹೆಸರು ಜಗತ್ಪ್ರಸಿದ್ಧವಾಗಿದೆ. ಪೌರಸ್ತ್ಯ ಸನಾತನ ಧರ್ಮದ ಅತ್ಯುಚ್ಚ ಆದರ್ಶವನ್ನೇ ತಮ್ಮ ಜೀವನದ ಧ್ಯೇಯವಾಗಿಸಿಕೊಂಡರೂ ವಿಶ್ವಜನತೆಯ ಮಂಗಲವನ್ನೇ ಕೋರುವ ಹೃದಯದಿಂದ ಹೊರಬಂದ ಚಿಂತನಾಲಹರಿಗಳು ಐಹಿಕ, ಆಮುಷ್ಮಿಕ, ಆಧ್ಯಾತ್ಮಿಕ ಜೀವನಕ್ಕೆ ಅಮೃತಕಲ್ಪವಾಗಿವೆ. ಮಾನವನನ್ನು ಮಾಧವನನ್ನಾಗಿಸುವುದೇ ಅವರ ಚಿಂತನೆಗಳ ಉದ್ದೇಶವಾಗಿತ್ತು. ಅದನ್ನು ಅವರು ವೈಜ್ಞಾನಿಕ, ಚಾರಿತ್ರಿಕ, ಸಾಮಾಜಿಕ, ಆರ್ಥಿಕ, ಕಲಾತ್ಮಕ, ರಾಜಕೀಯ ಆಯಾಮಗಳಿಂದ ವಿವರಿಸುತ್ತಿದ್ದರು. ಅವರ ಚಿಂತನೆಯ ವಿಷಯಗಳು ಇಷ್ಟೆಲ್ಲ ಕ್ಷೇತ್ರಗಳನ್ನು ಒಳಗೊಂಡಿದ್ದರೂ, ಅವುಗಳಲ್ಲಿ ಒಬ್ಬನನ್ನು ಮುಕ್ತನನ್ನಾಗಿಸುವ ಅಂತರಗಂಗೆಯ ಪ್ರವಾಹವೊಂದು ಗುಪ್ತಗಾಮಿನಿಯಾಗಿ ಪ್ರವಹಿಸುವುದನ್ನು ನೋಡಬಹುದು. ಅವರ ಈ ವಿಚಾರಧಾರೆಯು ಸಮಗ್ರ ಕೃತಿಶ್ರೇಣಿಯಲ್ಲಿ ಅಡಕವಾಗಿದೆ.

ತಮ್ಮ 'ರಾಷ್ಟ್ರೀಯ ವಿದ್ಯಾಭ್ಯಾಸ' ಎಂಬ ಲೇಖನದಲ್ಲಿ ಟಾಲ್‌ಸ್ಟಾಯ್ ಬರೆಯುತ್ತಾರೆ : "ಸಮಾನತೆಯ ಬಯಕೆಯನ್ನು ಅವಲಂಬಿಸಿರುವ ಹಾಗೂ ಜ್ಞಾನವರ್ಧನೆಗಾಗಿ ಸತತ ತುಡಿತವುಳ್ಳ ಮಾನವ ಚಟುವಟಿಕೆಯನ್ನು ವಿದ್ಯಾಭ್ಯಾಸ ಎನ್ನಬಹುದು." ಅವರ ಪ್ರಕಾರ ವಿದ್ಯಾಭ್ಯಾಸವು ಇತಿಹಾಸ. ಹೀಗಾಗಿ ಅದಕ್ಕೆ ಒಂದು ಅಂತಿಮ ಗುರಿ ಎನ್ನುವುದಿಲ್ಲ. ಅದನ್ನು ಸಾಧಿಸುವ ಏಕೈಕ ವಿಧಾನವೆಂದರೆ ಅನುಭವ. ಅದಕ್ಕೆ ಬೇಕಾದ ಏಕೈಕ ಪರಿಕರವೆಂದರೆ ಸ್ವಾತಂತ್ರ್ಯ. ಅವರು ತಮ್ಮ ಹುಟ್ಟೂರಾದ ಯಾಸ್ನಾಯಾ ಪೋಲ್ಯಾನಾದಲ್ಲಿ ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದಿದ್ದರು. ಅಲ್ಲಿ ಮಕ್ಕಳು ತಮಗೆ ಇಷ್ಟ ಬಂದಾಗ ತರಗತಿಗೆ ಬಂದು, ತಮಗಿಷ್ಟ ಬಂದಾಗ ತರಗತಿಯಿಂದ ಹೊರಹೋಗಬಹುದಿತ್ತು. ಮಕ್ಕಳಿಗೆ ಯಾವುದೇ ರೀತಿಯ ಶಿಕ್ಷೆಯಿರಲಿಲ್ಲ. ಟಾಲ್‌ಸ್ಟಾಯ್‌ರ ಪ್ರಕಾರ ವಿದ್ಯಾಭ್ಯಾಸವು ಸಾಮಾನ್ಯ ಜನರ ಆವಶ್ಯಕತೆಗಳನ್ನು ಪೂರೈಸಬೇಕು. ಆದರೆ ವಿದ್ಯಾಭ್ಯಾಸವು ವ್ಯಕ್ತಿಯ ಅಥವಾ ವಿದ್ಯಾರ್ಥಿಯ ಶೀಲವನ್ನು ರೂಪಿಸುವ ಅಥವಾ ನೈತಿಕತೆಯನ್ನು ವೃದ್ಧಿಗೊಳಿಸುವ ಸಾಧನವಾಗಿರಬೇಕೆಂಬ ಸಾಂಪ್ರದಾಯಿಕ ಶಿಕ್ಷಣಶಾಸ್ತ್ರದ ನಂಬಿಕೆಯನ್ನು ಅಲ್ಲಗಳೆದರು. ಅವರ ಪ್ರಕಾರ ಶೀಲ ನಿರ್ಮಾಣ ಅಥವಾ ನೈತಿಕತೆಯ ಅಭಿವೃದ್ಧಿಯು ಆಯಾ ವ್ಯಕ್ತಿಯ ಕುಟುಂಬದಿಂದ ಪ್ರಭಾವಿತವಾಗಬೇಕೇ ಹೊರತು ಶಾಲೆಯಲ್ಲಿ ಬೋಧಿಸುವ ಶಿಕ್ಷಕನ ವೈಯಕ್ತಿಕ ಅಭಿಪ್ರಾಯಗಳಿಂದಲ್ಲ. ಶಿಕ್ಷಕನು ವಿದ್ಯಾರ್ಥಿಯನ್ನು ಒಬ್ಬ ವಿಚಾರಶೀಲ ವ್ಯಕ್ತಿಯನ್ನಾಗಿ ಪರಿಗಣಿಸಬೇಕು. ಟಾಲ್‌ಸ್ಟಾಯ್‌ರ ಪ್ರಕಾರ ಎಲ್ಲಿ ಬಲ ಹಾಗೂ ನಿರ್ಬಂಧಗಳಿಂದ ಮುಕ್ತವಾದ ವಾತಾವರಣವಿರುವುದೋ ಅಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವೆ ಸಹಜ ಬಾಂಧವ್ಯ ಏರ್ಪಡುತ್ತದೆ. ಟಾಲ್‌ಸ್ಟಾಯ್ ತಾವು ತೆರೆದ ಶಾಲೆಯನ್ನೇ ಶಿಕ್ಷಣ ಕ್ಷೇತ್ರದ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡಿದ್ದರು. ಅವರಿಗೆ ರಷ್ಯಾ ಸರ್ಕಾರವು ಪಾಶ್ಚಾತ್ಯ ದೇಶಗಳ ಶಿಕ್ಷಣಕ್ರಮಗಳನ್ನು ಅನುಸರಿಸುವುದು ಸ್ವಲ್ಪವೂ ಸಹ್ಯವಾಗಲಿಲ್ಲ. ಅವರೆನ್ನುತ್ತಿದ್ದರು "ರಷ್ಯಾದ ಪ್ರಗತಿಯು ಸಾರ್ವಜನಿಕ ಶಿಕ್ಷಣದಿಂದ ಆಗಲೇಬೇಕು. ಜರ್ಮನಿಯಲ್ಲಿ ಸಾರ್ವಜನಿಕ ಶಿಕ್ಷಣವು ಉಂಟುಮಾಡುತ್ತಿರುವ



ವಿವಿಧ ಪರಿಸರಗಳ ಹಿನ್ನೆಲೆಗಳಿಂದ ಬಂದ ಇಬ್ಬರು ಸಮಕಾಲೀನ ಮಹಾಪುರುಷರು ತಮ್ಮ ಪ್ರಗಲ್ಭ ಚಿಂತನೆಗಳಿಂದ ಮಾನವ ಜನಾಂಗದ ಮೇಲೆ ಹೇಗೆ ತಮ್ಮ ಪ್ರಭಾವವನ್ನು ಬೀರುತ್ತಾರೆ ಎಂಬುದರ ಒಂದು ಸೂಕ್ಷ್ಮ ಪರಿಚಯ ನೀಡಿರುವ ಬ್ರ.ಅಭಯ ಚೈತನ್ಯ ಅವರು ಮೈಸೂರಿನ ಆಶ್ರಮದ ಅಂಗಸಂಸ್ಥೆಯಾದ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.





ಪ್ರಗತಿಗಿಂತ ನಮ್ಮಲ್ಲೇ (ರಷ್ಯಾದಲ್ಲೇ) ಅದು ಹೆಚ್ಚು ಫಲಪ್ರದ ವಾಗುತ್ತದೆ. ಏಕೆಂದರೆ, ರಷ್ಯಾದ ಸಾಮಾನ್ಯ ಜನರಿನ್ನೂ ಋಣಾತ್ಮಕ ಶಿಕ್ಷಣದಿಂದ ಕೆಟ್ಟುಹೋಗಿಲ್ಲ."

ಸ್ವಾಮಿ ವಿವೇಕಾನಂದರ ಶಿಕ್ಷಣವನ್ನು ಕುರಿತಾದ ಕಲ್ಪನೆಯು ತಾತ್ತ್ವಿಕವಾದದ್ದು : "ಮಾನವನಲ್ಲಿ ಅದಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿಯೇ ವಿದ್ಯಾಭ್ಯಾಸ." ಅನುಭವಸಿದ್ಧ ತಾತ್ತ್ವಿಕ ನೆಲೆಯಿಂದ ಅವರೆನ್ನುತ್ತಾರೆ: "ವ್ಯಕ್ತಿ 'ತಿಳಿದುಕೊಂಡ' ಎಂದು ಏನು ಹೇಳುತ್ತಾರೊ, ಮನಶ್ಶಾಸ್ತ್ರೀಯ ಭಾಷೆಯಲ್ಲಿ ನಿಜವಾಗಿ ಹೇಳಬೇಕಾದರೆ ಅದು 'ಆವಿಷ್ಕರಿಸುವುದು' ಅಥವಾ 'ಮುಸುಕನ್ನು ತೆಗೆದುಹಾಕುವುದು'. ಯಾರೂ ಯಾರಿಗೂ ಯಾವುದನ್ನೂ ಕಲಿಸಲು ಸಾಧ್ಯವಿಲ್ಲ. ಬಾಹ್ಯ ಶಿಕ್ಷಕನು ಕೆಲವು ಸಲಹೆಗಳನ್ನು ನೀಡುವುದರೊಂದಿಗೆ ಆಂತರಿಕ ಶಿಕ್ಷಕನನ್ನು ಪ್ರಚೋದಿಸುತ್ತಾನಷ್ಟೆ. ಶಿಕ್ಷಕನ ಕೆಲಸ ಚೋದನಾತ್ಮಕವಷ್ಟೆ. ವ್ಯಕ್ತಿಯು ಕಲಿಯುವ ಅಥವಾ ಜ್ಞಾನಾರ್ಜನೆಯ ವೇಳೆಯಲ್ಲಿ ಕೆಲವು ಅಪರಿಹಾರ್ಯ ಅಡಚಣೆಗಳನ್ನು ಎದುರಿಸುತ್ತಾನೆ. ಶಿಕ್ಷಕನಾದವನು ಆ ಅಡಚಣೆಗಳನ್ನು ತೆಗೆದುಹಾಕಿ ವಿದ್ಯಾರ್ಥಿಯ ಹಾದಿಯನ್ನು ಸುಗಮಗೊಳಿಸುತ್ತಾನೆ." "ವಿದ್ಯಾಭ್ಯಾಸವು 'ಮಾನವ-ನಿರ್ಮಾಣ' 'ಜೀವನ -ನಿರ್ಮಾಣ', 'ಶೀಲ-ನಿರ್ಮಾಣ'ಕಾರಿಯಾಗಬೇಕು. ವಿಚಾರಗಳನ್ನು ಜೀವನದಲ್ಲಿ ಅಳವಡಿಸಿ ಅವುಗಳನ್ನು ನಮ್ಮ ಶೀಲವಾಗಿ, ಜೀವನವಾಗಿ ರೂಪಿಸಬೇಕು. ಅದಲ್ಲದೆ ನಮ್ಮ ಮನಶ್ಶಕ್ತಿ ಹೆಚ್ಚಿ, ಬುದ್ಧಿಯು ವಿಶಾಲವಾಗಬೇಕು. ವಿದ್ಯಾಭ್ಯಾಸದಿಂದ ವ್ಯಕ್ತಿಯು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಬೇಕು." ವಿವೇಕಾನಂದರ ಪ್ರಕಾರ ಜ್ಞಾನಾರ್ಜನೆಗೆ ಬೇಕಾದ ಏಕಮಾತ್ರ ಪರಿಕರವೆಂದರೆ 'ಏಕಾಗ್ರತೆ'. ಈ ಏಕಾಗ್ರತೆ ಬರುವುದು ಅಸ್ಖಲಿತ ಬ್ರಹ್ಮಚರ್ಯದಿಂದ. ಯಾರು ಯಾವ ರೀತಿಯಲ್ಲಿ ಚಿಂತಿಸುತ್ತಾರೊ, ಅವರು ಅದರಂತೆಯೇ ಆಗುವರು. ಹೀಗಾಗಿ ಶ್ರದ್ಧೆ ಮುಖ್ಯ. ತನ್ನಲ್ಲಿ ತಾನು ಶ್ರದ್ಧೆಯಿಡಬೇಕು. ಶಿಷ್ಯನಾದವನು ಗುರುವಿನ ಬಳಿಯಿದ್ದು ಶಿಕ್ಷಕನ ವೈಯಕ್ತಿಕ ಜೀವನದಿಂದ ಅತ್ಯುತ್ತಮ ಶಿಕ್ಷಣವನ್ನು ಪಡೆಯುತ್ತಾನೆ. ವಿದ್ಯಾರ್ಥಿಗಳಿಗೆ ಲೌಕಿಕ ಹಾಗೂ ಆಧ್ಯಾತ್ಮಿಕ ಶಿಕ್ಷಣಗಳೆರಡನ್ನೂ ನೀಡಬೇಕು. ತಾಂತ್ರಿಕ ಶಿಕ್ಷಣದಿಂದ ವ್ಯಕ್ತಿಯು ತನ್ನ ಕಾಲ ಮೇಲೆ ತಾನು ನಿಲ್ಲುತ್ತಾನೆ. ಸಮಾಜದ ಸಮಸ್ಯೆಗಳಿಗೆ ವಿದ್ಯಾಭ್ಯಾಸವೊಂದೆ ರಾಮಬಾಣವೆಂಬುದು ಅವರ ಅಭಿಪ್ರಾಯ.

ಟಾಲ್‌ಸ್ಟಾಯ್‌ರ ಪ್ರಕಾರ ಧರ್ಮವೆನ್ನುವುದು ಮನುಷ್ಯನು ತನ್ನ ವ್ಯಕ್ತಿತ್ವಕ್ಕೂ, ವಿಶ್ವ ಅಥವಾ ಅದರ ಮೂಲಶಕ್ತಿಗೂ ನಡುವೆ ಸ್ಥಾಪಿಸಿಕೊಂಡ ಒಂದು ನಿರ್ದಿಷ್ಟ ಸಂಬಂಧ. ಧರ್ಮವಿಲ್ಲದೆ ಮನುಷ್ಯ ಜೀವಿಸಲಾರ. ನೈತಿಕತೆಯೆನ್ನುವುದು ಆ ಧರ್ಮದಿಂದ ಮೂಡಿ ಬಂದು ಅವನ ಜೀವನಕ್ಕೆ ಸದಾ ದಾರಿ ತೋರುತ್ತಿರುವ ತತ್ತ್ವ. ಅವರ ಪ್ರಕಾರ ಸತ್ಯವನ್ನು ತಲುಪಲು ವಿಚಾರವೊಂದೇ ಮಾರ್ಗ. ಮನುಷ್ಯನ ಪ್ರತಿಯೊಂದು ಪುಟ್ಟ ಕೆಲಸದಲ್ಲೂ ಅನುಭೂತಿ, ವಿವೇಕ ಮತ್ತು ಸಂಕೇತಗಳ ಪ್ರಭಾವವಿರಲೇಬೇಕೆಂಬುದು ಟಾಲ್‌ಸ್ಟಾಯ್‌ರವರ ಅಭಿಪ್ರಾಯ. ಅಂತಃಸ್ಫೂರ್ತಿಯೆನ್ನುವುದು ಮನುಷ್ಯನಿಗೂ ಭಗವಂತನಿಗೂ ನಡುವೆ ಸಂಬಂಧ ಸ್ಥಾಪಿಸುವ ಆವಶ್ಯಕತೆಯನ್ನು ಜಾಗೃತಗೊಳಿಸುತ್ತದೆ. ಬುದ್ಧಿ ಅಥವಾ ವಿವೇಕವೆನ್ನುವುದು ಆ ಸಂಬಂಧದ ಎಲ್ಲೆಯನ್ನು ನಿಶ್ಚಯಿಸುತ್ತದೆ. ಸಂಕೇತವು ಮನುಷ್ಯನನ್ನು ಆ ಸಂಬಂಧದ ಅನ್ವಯ ಕಾರ್ಯ ಮಾಡಲು ಪ್ರೇರೇಪಿಸುತ್ತದೆ. ಆದರೆ ಈ ರೀತಿಯಾಗಿ ಆಗುವುದು ಕೇವಲ ಧರ್ಮವು ಶುದ್ಧವೂ, ನಿರ್ವಿಕಾರವೂ ಆಗಿದ್ದಾಗ. ಯಾವಾಗ ಧರ್ಮಕ್ಕೆ ವಿಕಾರವು ಅಂಟುವುದೊ ಆಗ ಮಾನವನ ಮೇಲೆ ಸಂಕೇತಗಳ ಪ್ರಭಾವ ಅಧಿಕವಾಗುತ್ತದೆ ಮತ್ತು ಬುದ್ಧಿ, ಅಂತಃಸ್ಫೂರ್ತಿಗಳ ಕಾರ್ಯ ಕಡಿಮೆಯಾಗುತ್ತದೆ. ಶಾಸ್ತ್ರಕಾರನು ಮನುಷ್ಯಜೀವನದ ಕೆಲವು ಪ್ರಮುಖ ಘಟನೆಗಳಲ್ಲಿ ಸಂಕೇತಗಳನ್ನು ಬಳಸಿ ಅವನನ್ನು ಸಮ್ಮೋಹಗೊಳಿಸುತ್ತಾನೆ. ಉದಾಹರಣೆಗೆ, ಮನುಷ್ಯನ ಜನನ, ಮರಣ, ವಿವಾಹೋತ್ಸವಗಳೇ ಮೊದಲಾದ ಜೀವನದ ಮಹತ್ವದ ಘಟನೆಗಳಲ್ಲಿ ಕಲೆಯ ಮೂಲಕ ಅಂದರೆ, ಶಿಲ್ಪಕಲೆ, ಸಂಗೀತ, ಚಿತ್ರಕಲೆಗಳೇ ಮೊದಲಾದವುಗಳ ಮೂಲಕ ಮನುಷ್ಯನ ಮೇಲೆ ಶಾಸ್ತ್ರಕಾರನು ತನ್ನ ಪ್ರಭಾವವನ್ನು ಬೀರುತ್ತಾನೆ. ಭಗವಂತನು ತನ್ನ ಉಪದೇಶಗಳಲ್ಲಿ ಸಮಾನತೆಯನ್ನು ಬೋಧಿಸಿರುತ್ತಾನೆ. ಆದರೆ ಪುರೋಹಿತಶಾಹಿ ವರ್ಗವು ಈ ಮೇಲೆ ಚರ್ಚಿಸಿದ ಸಂಕೇತಗಳ ಮೂಲಕ ಮನುಷ್ಯನ ಮನಸ್ಸಿನ ಮೇಲೆ ಅಸಮಾನತೆಯ ಪ್ರಭಾವವನ್ನು ಬೀರುತ್ತದೆ. ಪ್ರತಿಯೊಂದು ವ್ಯವಸ್ಥಿತ ಧರ್ಮದಲ್ಲೂ ಈ ರೀತಿ

ಅಸಮಾನತೆಯ ಬೋಧನೆಯಾಗಿದೆ. ಇಂದಿಗೂ ಆಗುತ್ತಿದೆ. ತಾವು ಬರೆದ 'ಎ ಕನ್‌ಫೆಷನ್' ಲೇಖನಮಾಲೆಯಿಂದ ಕ್ರೈಸ್ತಸಮಾಜದ ಉನ್ನತಾಧಿಕಾರಿಗಳ ಕೆಂಗಣ್ಣಿಗೆ ಗುರಿಯಾದರು. ಇಷ್ಟಾದರೂ, ಅವರು ಕ್ರಿಸ್ತನ ಅಮರವಾಣಿಗಳನ್ನು ಮಾತ್ರ ಅನುಮೋದಿಸಿ, ಕ್ರೈಸ್ತ ಸಮಾಜವು ಏಸುವಿನದಲ್ಲದ ಸಿದ್ಧಾಂತದ ಮೇಲೆ ನಿಂತಿದೆ ಎಂದು ಖಂಡಿಸಿದರು.

"ಧರ್ಮವೆಂದರೆ, ಮಾನವನಲ್ಲಿ ಅದಾಗಲೇ ಹುದುಗಿರುವ ಶಾಶ್ವತ ಸತ್ಯದ ಅಭಿವ್ಯಕ್ತಿ", "ಧರ್ಮವೆಂದರೆ ಸಾಕ್ಷಾತ್ಕಾರ"—ಇದು ಧರ್ಮವನ್ನೇ ಉಸಿರಾಗಿಸಿಕೊಂಡ ಸ್ವಾಮಿ ವಿವೇಕಾನಂದರ ಅಭೂತಪೂರ್ವ ವ್ಯಾಖ್ಯಾನ. ತಮ್ಮ ಗುರುಗಳಿಂದ ಧರ್ಮದ ಸಾರವಾದ ಅನುಭವವನ್ನು ಮೂರ್ತವಾಗಿ ಪಡೆದ ವಿವೇಕಾನಂದರ ಈ ವ್ಯಾಖ್ಯಾನವು ತಾತ್ವಿಕ ಹಿನ್ನೆಲೆಯಿಂದಷ್ಟೇ ನೀಡಿದ ಇತರ ವ್ಯಾಖ್ಯಾನಗಳಿಗಿಂತ ಉತ್ಕೃಷ್ಟವೆಂದರೆ ಅತಿಶಯೋಕ್ತಿಯಾಗದು. ಬಾಹ್ಯಾಚರಣೆಗಳಿಗಷ್ಟೇ ಧರ್ಮದ ಹೊದಿಕೆ ಹೊದಿಸಿ, ಮೂಲಭೂತವಾದ ಏಕಮತ್ಯವನ್ನೇ ಕಡೆಗಣಿಸಿ, ತಿಳಿವಳಿಕೆಯಿಲ್ಲದೆ ಆಚರಿಸುತ್ತಿರುವ ಆಧುನಿಕ ಧಾರ್ಮಿಕರ ಮೂಢನಂಬಿಕೆಗಳಿಗೆ ಕೊಡಲಿಯ ಪೆಟ್ಟುಗಳಂತಿವೆ ಈ ಮಾತುಗಳು. ಧಾರ್ಮಿಕ ಜೀವನದಲ್ಲಿ ಲೋಕಾಚಾರಗಳಿಗೆ ಹಾಗೂ ಇತರ ಬಾಹ್ಯಾಚರಣೆಗಳಿಗೆ ಇರುವ ಪ್ರಾಮುಖ್ಯ ಎಷ್ಟೆಂದರೆ, ಶಿಕ್ಷಣದ ಆರಂಭಿಕ ಹೆಜ್ಜೆಯಾದ ಶಿಶುವಿಹಾರಗಳಂತೆ. ಮುಂದೆ ಮಕ್ಕಳಿಗೆ ಶಿಶುವಿಹಾರದ ಆವಶ್ಯಕತೆ ಇರುವುದಿಲ್ಲ. ಧರ್ಮವು ವಿದ್ಯಾಭ್ಯಾಸದ ಸಾರಭೂತವಾದ ಅಂಶ ಎನ್ನುತ್ತಾರೆ ವಿವೇಕಾನಂದರು. ಧರ್ಮವೆಂದರೆ ಯಾವುದೇ ವ್ಯಕ್ತಿಯ ಸ್ವಂತ ಅಭಿಪ್ರಾಯವಲ್ಲವೆಂದೂ ಎಚ್ಚರಿಸುತ್ತಾರೆ. ಶಾಶ್ವತ ಸತ್ಯಗಳನ್ನೂ, ತತ್ತ್ವಗಳನ್ನೂ ಜನರ ಮುಂದಿಡುವುದು ಧರ್ಮದ ಕೆಲಸ. ತಮ್ಮ ಗುರುಗಳಾದ ಶ್ರೀರಾಮಕೃಷ್ಣರ ಆವಿಷ್ಕಾರವನ್ನು ಲೋಕದ ಮುಂದಿಡುತ್ತ, "ಸತ್ಯಕ್ಕೆ ಹಲವು ಮಾರ್ಗಗಳು, ಅದನ್ನು ಯಾವುದಾದರೂ ಒಂದು ಮಾರ್ಗದಿಂದ ಮುಟ್ಟಬೇಕು. ಎಲ್ಲ ಮಾರ್ಗಗಳೂ ಸರಿಯಾದವುಗಳೇ" ಎನ್ನುತ್ತಾರೆ.

ಕಲೆಯ ಕುರಿತು ತಮ್ಮ 'ವಾಟ್ ಈಸ್ ಆರ್ಟ್?' ಎಂಬ ಲೇಖನದಲ್ಲಿ ಟಾಲ್‌ಸ್ಟಾಯ್ ಬರೆಯುತ್ತಾರೆ: "ಒಬ್ಬ ವ್ಯಕ್ತಿ ಪ್ರಜ್ಞಾಪೂರ್ವಕವಾಗಿ, ಕೆಲವು ಬಾಹ್ಯ ಸಂಕೇತಗಳಿಂದ ಇತರರಿಗೆ ತಾನು ಅನುಭವಿಸಿದ ಸಂವೇದನೆಗಳನ್ನು ಹಸ್ತಾಂತರಗೊಳಿಸುವ, ಆ ಇತರರು ಅವೇ ಸಂವೇದನೆಗಳನ್ನು ಮುಟ್ಟಿ ಅನುಭವಿಸುವಂತೆ ಮಾಡುವ ಮಾನವ ಚಟುವಟಿಕೆಯೇ ಕಲೆ. ನಿಜವಾದ ಕಲೆಯ ಪ್ರಭಾವಕ್ಕೆ ಒಳಗಾದವನು ಕಲಾವಿದನೊಂದಿಗೆ ಎಷ್ಟುಮಟ್ಟಿಗೆ ತಾದಾತ್ಮ್ಯವನ್ನು ಸಾಧಿಸಿರುತ್ತಾನೆಂದರೆ ಆ ಕೃತಿಯು ಇನ್ನೊಬ್ಬನದಲ್ಲ, ತನ್ನದೇ ಎಂದು ಅವನಿಗನ್ನಿಸುತ್ತದೆ. ಕಲೆಯ ಉದ್ದೇಶ ಕೇವಲ ಸಂತೋಷವನ್ನು ನೀಡುವುದಲ್ಲ. ಸೌಂದರ್ಯವೂ ಕಲೆಯ ಗುರಿಯಾಗಲಾಗದು. ಭ್ರಾತೃತ್ವವನ್ನು ಮತ್ತು ನೆರೆಹೊರೆಯವರನ್ನು ಕುರಿತ ಪ್ರೇಮವು ಎಲ್ಲರಲ್ಲೂ ಸಹಜ ಸ್ವಭಾವವಾಗುವಂತೆ ಮಾಡುವುದನ್ನು ಕಲೆ ಸಾಧಿಸಬೇಕು."

ಸ್ವಾಮಿ ವಿವೇಕಾನಂದರು ಕಲೆಯ ಕುರಿತು ಹೇಳುತ್ತ, "ಮಾನವನು ಏನನ್ನೇ ಸೃಷ್ಟಿಸಲಿ ಅಲ್ಲಿ ಕೆಲವು ಭಾವನೆಗಳು ಅಭಿವ್ಯಕ್ತವಾಗಿದ್ದರೆ ಅಲ್ಲಿ ಕಲೆಯ ಆವಿರ್ಭಾವ ಉಂಟಾಗಿರುತ್ತದೆ. ಎಲ್ಲಿ ಭಾವನೆಗಳ ಅಭಿವ್ಯಕ್ತಿಯಿಲ್ಲದೆ, ಎಷ್ಟೇ ರಂಗಿನ ವಿನ್ಯಾಸಗಳಿದ್ದರೂ ಅದನ್ನು ಒಂದು ನೈಜ ಕಲೆಯೆನ್ನಲಾಗದು. ಯಾವುದೇ ಕ್ಷೇತ್ರದಲ್ಲಾಗಲಿ ಮಾನವನು ಸೃಜನಶೀಲತೆಯನ್ನು ಹೊರಹೊಮ್ಮಿಸಬೇಕು." ಸ್ವಾಮೀಜಿಯವರ ಕಲೆಯ ಕುರಿತಾದ ಅಗಾಧ ಪಾಂಡಿತ್ಯವು, ಅವರು ಕೊಲ್ಕತಾದ ಜ್ಯುಬಿಲಿ ಆರ್ಟ್ ಅಕಾಡೆಮಿಯ ಸಂಸ್ಥಾಪಕರಾದ ಶ್ರೀರಣದಾಪ್ರಸಾದ್ ದಾಸಗುಪ್ತಾರೊಂದಿಗೆ ನಡೆಸಿದ ಸಂಭಾಷಣೆಗಳಲ್ಲಿ ವ್ಯಕ್ತವಾಗುತ್ತದೆ.

ಕಾರ್ಲ್ ಮಾರ್ಕ್ಸ್‌ರಂತೆಯೇ ಸಮಾಜವಾದವನ್ನು ಪ್ರತಿಪಾದಿಸಿದರೂ ಟಾಲ್‌ಸ್ಟಾಯ್ ಅದಕ್ಕಾಗಿ ರಕ್ತಕ್ರಾಂತಿ ಬಯಸಿರಲಿಲ್ಲ. ಆಸ್ತಿಕ್ಯವಾದಿಗಳಾದ ಟಾಲ್‌ಸ್ಟಾಯ್‌ರವರು ಕ್ರಿಸ್ತನ ಅಮರವಾಣಿಗಳಲ್ಲಿ ಜೀವನ ಪರಿವರ್ತನೆ ಮಾಡಬಲ್ಲ ಐದನ್ನು ಆರಿಸಿಕೊಂಡು ಅದರ ಆಧಾರದ ಮೇಲೆ ಸಮಾಜದ ಬುನಾದಿಯನ್ನು ಕಟ್ಟುವ ವಿಚಾರಧಾರೆಯನ್ನು ಲೋಕಕ್ಕೆ ಕೊಟ್ಟರು. ಅಂದಿನ ರಷ್ಯಾದಲ್ಲಿದ್ದ ಊಳಿಗಮಾನ್ಯ ಪದ್ಧತಿಯನ್ನು ಕಟುವಾಗಿ ಟೀಕಿಸಿದ್ದ ಟಾಲ್‌ಸ್ಟಾಯ್‌ರವರು ಶ್ರಮಜೀವಿಗಳ ಸುಧಾರಣೆಯಾಗಬೇಕಿದ್ದರೆ ಅವರು ಜಮೀನ್ದಾರರ ಜಮೀನುಗಳಲ್ಲಿ ಕೆಲಸ ಮಾಡುವುದನ್ನು ಬಿಟ್ಟುಬಿಡಬೇಕೆನ್ನುತ್ತಾರೆ. ಹಾಗೆಯೇ ಸೈನ್ಯದಲ್ಲಿ ಸೇರಿಕೊಂಡು ಇತರೆ ಶ್ರಮಜೀವಿಗಳ ಮೇಲೆ ದೌರ್ಜನ್ಯ ನಡೆಸುವುದನ್ನು ವಿರೋಧಿಸಬೇಕು. ತೆರಿಗೆ ವಸೂಲಿ ಮಾಡುವ ಕೆಲಸಕ್ಕೂ ಸೇರಬಾರದು, ಇವೆಲ್ಲ ಭಗವಾನ್ ಏಸುವಿನ ವಾಣಿಗೆ ವಿರುದ್ಧವಾಗಿವೆ ಎನ್ನುತ್ತಾರೆ. ಯಾವಾಗ ಈ ಶ್ರಮಜೀವಿಗಳು ಈಶ್ವರನ ಆಜ್ಞಾನುಸಾರ ಅಥವಾ ತಮ್ಮ ಅಂತಃಕರಣದ ಪ್ರೇರಣೆಯಿಂದ ಕೆಲಸ ಮಾಡುವರೋ, ಅಂದರೆ ಹಿಂದಿಗಿಂತ ಹೆಚ್ಚು ಸತ್ಯನಿಷ್ಠರಾಗಿ, ಸದಾಚಾರಿಗಳಾಗಿ ಕೆಲಸ ಮಾಡುವರೋ ಆಗ ಅವರು ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಬಲ್ಲರು. ಶ್ರೀಮಂತರೆನ್ನಿಸಿಕೊಂಡವರು ತಮ್ಮ ಜೀವನಕ್ರಮಗಳನ್ನು ಬದಲಿಸಿಕೊಳ್ಳುವುದರಿಂದ, ಸರಳ ಜೀವನ ನಡೆಸುವುದರಿಂದ ಗುಲಾಮಗಿರಿಯನ್ನು ತೊಡೆದುಹಾಕಬಹುದು. ಟಾಲ್‌ಸ್ಟಾಯ್ ಕೇವಲ ಬಾಯಿಮಾತಿನಲ್ಲೇ ಬಡವರಿಗಾಗಿ ಮರುಗುತ್ತಿರಲಿಲ್ಲ. ೧೮೯೧ರಲ್ಲಿ ರಷ್ಯಾದ ಬರಗಾಲ ಪರಿಸ್ಥಿತಿಯಲ್ಲಿ ತಮ್ಮ ಸ್ನೇಹಿತರೊಡಗೂಡಿ ಸಂತ್ರಸ್ತರಿಗೆ ನೆರವಾಗಲು ಪ್ರಯತ್ನಿಸಿದರು. ಸಮಾಜಸುಧಾರಣೆಯ ಮಾತೆತ್ತುತ್ತ ಟಾಲ್‌ಸ್ಟಾಯ್ ಹೇಳುತ್ತಾರೆ, "ನೈತಿಕ ಕ್ರಾಂತಿ ಅಥವಾ ನಮ್ಮ ಸ್ವಭಾವ ಪರಿವರ್ತನೆಯೊಂದೇ ಸ್ಥಾಯಿಯಾದ ಕ್ರಾಂತಿ. ಮಾನವ ಸಮಾಜದ ಪರಿವರ್ತನೆಯನ್ನೇ ಎಲ್ಲರೂ ಮಾಡಲು ಉತ್ಸುಕರಾಗಿರುತ್ತಾರೆ. ಆದರೆ ಪ್ರತಿಯೊಬ್ಬನಿಗೂ ತನ್ನೊಳಗೇ ಅನುಭವಕ್ಕೆ ಬರುವ ಪರಿವರ್ತನೆಯನ್ನು ಹೊಂದಲು ಇಚ್ಛೆಯಿಲ್ಲ." ಈ ಮಾತುಗಳು ನಿಜಕ್ಕೂ ಮನನಯೋಗ್ಯ.

ತಮ್ಮ ಪರಿವ್ರಾಜಕ ದಿನಗಳಲ್ಲಿ ಭಾರತದ ದಾರಿದ್ರ್ಯದ ಕುರಿತು ಸ್ಪಷ್ಟ ಚಿತ್ರಣವನ್ನು ಹೊಂದಿದ್ದ ಸ್ವಾಮಿ ವಿವೇಕಾನಂದರು, ತಮ್ಮ ದೀನ ಭಾರತೀಯ ಸಹೋದರನಿಗಾಗಿ ಮಮ್ಮಲ ಮರುಗುತ್ತಾರೆ. ಭಾರತೀಯರ ದಾರಿದ್ರ್ಯಕ್ಕೆ ಅವರ ದೀನ-ದುಃಖ ಮನೋಭಾವವೇ

ಕಾರಣವೆಂದೂ, ಅದನ್ನು ಕೊಡವಿಹಾಕಬೇಕೆಂದೂ ಘರ್ಜಿಸುತ್ತಾರೆ. ಭಾರತವು ವಿದೇಶಕ್ಕೆ ತನ್ನ ಆಧ್ಯಾತ್ಮಿಕ ರತ್ನಗಳನ್ನು ನೀಡಿ, ಅಲ್ಲಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ತಂದು ತನ್ನ ಕೋಟಿ ಕೋಟಿ ಹಸಿದ ಹೊಟ್ಟೆಗಳಿಗೆ ಬೇಕಾದ ಅನ್ನವನ್ನು ಉತ್ಪಾದಿಸ ಬಹುದು ಎಂಬ ಸಲಹೆ ಒಬ್ಬ ಸರ್ವಸಂಗಪರಿತ್ಯಾಗಿಯಾದ ಸಂನ್ಯಾಸಿಯೋರ್ವನಿಂದ ಬಂದೀತೆಂದು, ಅಂದಿನ ಭಾರತವೇನು ಬಹುಶಃ ಇಂದಿನ ಭಾರತವೂ ಕಲ್ಪಿಸಿಕೊಳ್ಳಲಾರದು. ಸಾಮಾಜಿಕವಾಗಿ ಶತಮಾನಗಳಿಂದ ಶೋಷಣೆಗೊಳಗಾಗುತ್ತಿರುವ ವರ್ಗದ ಬಗ್ಗೆ ಸ್ವಾಮೀಜಿಯವರ ಕಳಕಳಿ ಅಪಾರವಾಗಿತ್ತು. ಇಂದು ರಾಜಕೀಯ ನಾಟಕವಾಗಿ ಪರಿವರ್ತನೆಗೊಂಡಿರುವ ದಲಿತರ ಉದ್ಧಾರದ ಬಗ್ಗೆ ಸ್ವಾಮೀಜಿ ಅಂದೇ ಮದ್ರಾಸಿನಲ್ಲಿ ನೀಡಿದ ಭಾಷಣದಲ್ಲಿ ಉನ್ನತ ವರ್ಗದ ಭಾರತೀಯರಿಗೆ ಕಳಕಳಿಯ ಕಿವಿಮಾತು ಹೇಳುತ್ತಾರೆ. ಸಮಾಜದ ನಿಮ್ನವರ್ಗವು ತನ್ನ ಹಕ್ಕಿಗಾಗಿ ಸಂಘರ್ಷಕ್ಕೆ ಎಳಸುವುದೆಂಬ ಮುನ್ನೋಟವನ್ನು ಕಂಡವರೇ ಸ್ವಾಮಿ ವಿವೇಕಾನಂದರು. ತಮ್ಮ ಯೂರೋಪು ಪ್ರವಾಸದ ಸ್ಮೃತಿಲೇಖನದಲ್ಲಿ ಅವರು ಬರೆಯುತ್ತಾರೆ: "... ತಮ್ಮ ಮುಂದೆ ಮಾಡಲು ಬೃಹತ್ ಕಾರ್ಯಗಳಿದ್ದಾಗ ಎಲ್ಲರೂ ಮಹಾನ್ ವ್ಯಕ್ತಿಗಳೇ. ಸಹಸ್ರಾರು ಮಂದಿ ತಮ್ಮನ್ನು 'ಭಲೇ', 'ಭೇಷ್' ಎಂದು ಪ್ರೋತ್ಸಾಹಿಸುತ್ತಿರುವಾಗ ಒಬ್ಬ ಹೇಡಿಯೂ ತನ್ನ ಜೀವನವನ್ನು ತ್ಯಾಗ ಮಾಡಬಲ್ಲ; ಒಬ್ಬ ಮಹಾ ಸ್ವಾರ್ಥಿಯೂ ಮಹಾ ವೀರನಂತೆ ಸೋಗುಹಾಕಬಲ್ಲ. ಆದರೆ ಯಾರೂ ಗಮನಿಸದೆಯೇ ಇರುವಾಗಲೂ ತನ್ನ ಅಗಣಿತ ಕಾರ್ಯಗಳಲ್ಲಿ ಅದೇ ನಿಃಸ್ವಾರ್ಥತೆಯನ್ನೂ, ಶ್ರದ್ಧೆಯನ್ನೂ ತೋರಬಲ್ಲವನೇ ನಿಜಕ್ಕೂ ಧನ್ಯ—ಅದನ್ನು ನಿಜಕ್ಕೂ ಮಾಡುತ್ತಿರುವವರು ಭಾರತದ ದಲಿತ ಕಾರ್ಮಿಕ ವರ್ಗ! ನಿನಗೆ ನನ್ನ ನಮನ." 'ದರಿದ್ರ ದೇವೋ ಭವ' ಎಂಬ ಹೊಸ ಜೀವನಮಂತ್ರವೊಂದನ್ನೇ ಹುಟ್ಟುಹಾಕಿದ್ದಾರೆ ಅವರು. ಕೇರಳದ ಈಳವ ಸಮಾಜದ ಉದ್ಧಾರಕ್ಕೆ ಡಾಕ್ಟರ್ ಪಲ್ಪುರವರಿಗೆ, ಸಂಘಟನೆಗೆ ಬೇಕಾದ ಉತ್ತೇಜನವನ್ನೂ, ಮಾರ್ಗ ದರ್ಶನವನ್ನೂ ಕೊಟ್ಟಿದ್ದನ್ನು ಅವರ ಜೀವನಚರಿತ್ರೆಯಲ್ಲಿ ಕಾಣು ತ್ತೇವೆ. ವಿವೇಕಾನಂದರ ಸಮಾಜಸುಧಾರಣೆ 'ಆಮೂಲಾಗ್ರ' ವಾಗಿತ್ತು. ವ್ಯಕ್ತಿಯ ಆತ್ಮಶಕ್ತಿಯು ಜಾಗೃತವಾದಲ್ಲಿ ಸಮಾಜವು ತನ್ನಿಂದ ತನ್ನಷ್ಟಕ್ಕೆ ಸುಧಾರಣೆಗೊಳ್ಳುತ್ತದೆಂಬುದು ಅವರ ನಂಬಿಕೆಯಾಗಿತ್ತು. ಸಮಾಜಸುಧಾರಣೆಯನ್ನು ಆಧ್ಯಾತ್ಮಿಕ ದೃಷ್ಟಿಯಿಂದ ನೋಡುತ್ತ "ಜಗತ್ತನ್ನು ಉದ್ಧರಿಸಲು ನಮ್ಮಿಂದಾಗದು. ಜಗತ್ತನ್ನು ಉದ್ಧರಿಸುವ ನೆವದಲ್ಲಿ ನಿಜವಾಗಿ ಉದ್ಧಾರವಾಗುವವರು ನಾವೇ" ಎನ್ನುತ್ತಾರೆ.

ಜಗತ್ತಿಗೆ ಹೊಸ ಆಲೋಚನಾ ಕ್ರಮವನ್ನು ನೀಡಿದ ಈ ಮಹಾನ್ ಚಿಂತಕರು ಪರಸ್ಪರ ವಿಚಾರವಿನಿಮಯವನ್ನು ಮಾಡಿಕೊಂಡಿದ್ದರೆ, ಪತ್ರವ್ಯವಹಾರವನ್ನಾದರೂ ಮಾಡಿದ್ದರೆ, ಎಂಬ ಕುತೂಹಲವು ನಮ್ಮಲ್ಲನೇಕರಿಗೆ ಉಂಟಾಗದೆ ಇರದು. ಆ ಕುರಿತು ಇನ್ನೂ ಹೊಸ ಸಂಶೋಧನೆಗಳು ಬೆಳಕು ಬೀರೀತೆಂದು ಆಶಿಸೋಣ. ಲಿಯೋ ಟಾಲ್‌ಸ್ಟಾಯ್ ಅವರ ಕೆಲವು ಪತ್ರಗಳಿಂದ, ಅವರ ನಿಕಟವರ್ತಿಗಳ ಉಕ್ತಿಗಳಿಂದ ಹಾಗೂ ಅವರ ದಿನಚರಿಯಲ್ಲಿರುವ ಕೆಲವು ಬರಹಗಳಿಂದ ನಮಗೆ ತಿಳಿದುಬರುವುದೇನೆಂದರೆ, ಭಾರತದಲ್ಲಿರುವ ಅವರ ಒಬ್ಬ ಅನುಯಾಯಿಯಿಂದ (ಶ್ರೀ ಅನೇಂದ್ರಕುಮಾರ್ ದತ್ತ) ಅವರಿಗೆ ಸ್ವಾಮಿ ವಿವೇಕಾನಂದರ ರಾಜಯೋಗದ ಮೇಲಿನ ಅಭಿಪ್ರಾಯಗಳು ಸಿಕ್ಕಿದ್ದವು. ಅದನ್ನವರು ಓದಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ೧೯೦೮ರಲ್ಲಿ ಐ.ಎಫ್. ನಜಿವಿನ್ ಎಂಬ ಲೇಖಕರಿಂದ ರಷ್ಯನ್ ಭಾಷೆಗೆ ತರ್ಜುಮೆಗೊಂಡ ವಿವೇಕಾನಂದರ ಎರಡು ಭಾಷಣಗಳನ್ನು ಮತ್ತು ಸೃಷ್ಟಿಯ ಮೇಲಿನ ಕವನವನ್ನು ಕಳುಹಿಸಿಕೊಡಬೇಕೆಂದು ಟಾಲ್‌ಸ್ಟಾಯ್ ತಮ್ಮ ಪತ್ರದಲ್ಲಿ ಬರೆಯುತ್ತಾರೆ. "ದಯವಿಟ್ಟು ನನಗೆ ಆ ಬ್ರಾಹ್ಮಣನ ಗ್ರಂಥವನ್ನು ಕಳುಹಿಸಿಕೊಡು. ಅಂತಹ ಪುಸ್ತಕಗಳ ಓದುವಿಕೆಯು ಎಲ್ಲಾ ಸಂತೋಷವನ್ನು ಮೀರಿಸುತ್ತದೆ. ಅದು ಮನಸ್ಸನ್ನು ಮೇಲಕ್ಕೆತ್ತುತ್ತದೆ" ಎಂದು ಟಾಲ್‌ಸ್ಟಾಯ್ ಪತ್ರದಲ್ಲಿ ಬರೆದಿದ್ದಾರೆ. ಮಾಕೋವಿಕ್ಸ್ಕಿ ಎಂಬವರಿಗೆ ಅವರು ಹೇಳುತ್ತಾರೆ, "ಬೆಳಿಗ್ಗೆ ಆರು ಗಂಟೆಯಿಂದ ನಾನು ವಿವೇಕಾನಂದರನ್ನು ಕುರಿತು ಚಿಂತಿಸುತ್ತಿದ್ದೇನೆ. ನಿನ್ನೆ ಇಡೀ ದಿವಸ ಅವರ ಕೃತಿಯನ್ನು ಓದಿದೆ. ಅದರಲ್ಲಿ ಅನ್ಯಾಯವನ್ನು ಎದುರಿಸಿ ನಿಲ್ಲಬೇಕೆಂಬುದರ ಬಗ್ಗೆ ಸಮರ್ಥವಾಗಿ ಹೇಳಲಾಗಿದೆ. ಬಹಳ ಪಾಂಡಿತ್ಯಪೂರ್ಣವಾಗಿ ಬರೆಯಲಾಗಿದೆ." (ವಿವರಗಳಿಗಾಗಿ *Swami Vivekananda–A Study in Soviet Union*, pub. Indian Institute of Culture ಗ್ರಂಥವನ್ನು ನೋಡಬಹುದು.)

ಸ್ವಾಮಿ ವಿವೇಕಾನಂದರು ಮತ್ತು ಲಿಯೋ ಟಾಲ್‌ಸ್ಟಾಯ್ ವಿಶ್ವಕ್ಕೆ ನೀಡಿದ ಚಿಂತನೆಗಳ ಮೇಲೆ ಹೆಚ್ಚು ಹೆಚ್ಚು ಅಧ್ಯಯನಗಳು ನಡೆಯಬೇಕು. ಅವರ ಚಿಂತನೆಗಳು ಕಾರ್ಯರೂಪಗೊಂಡಾಗ ಸಮಾಜವು ತನ್ನೆಲ್ಲ ಕೆಡಕುಗಳನ್ನು ಕೊಡವಿ ಆತ್ಮಜಾಗೃತಿಯನ್ನು ಹೊಂದುವುದು ದಿಟ. ಅವರ ಚಿಂತನೆಗಳು ಸಮಾಜದ ವಿದ್ಯಾವಂತ ವರ್ಗಕ್ಕಷ್ಟೇ ಅಲ್ಲ, ಅನಕ್ಷರಸ್ಥ ಆಬಾಲವೃದ್ಧಾದಿ ಎಲ್ಲ ವರ್ಗದ ಜನರಿಗೂ ತಲುಪಬೇಕು. ಆಗ ಮಾತ್ರ ಇಡೀ ಸಮಾಜವೇ ಶಕ್ತಿಯುತವಾಗಿರಲು, ಶಾಂತಿಯಿಂದಿರಲು ಸಾಧ್ಯ. ✡

## ಆಶ್ರಮದ ಕಾರ್ಯಕ್ರಮಗಳು

### ಮೇ 2005

| | | |
|---|---|---|
| ಏಕಾದಶಿ | 04 | ಬುಧವಾರ |
| ಶ್ರೀಬಸವ ಜಯಂತಿ | 11 | ಬುಧವಾರ |
| ಶ್ರೀರಾಮಾನುಜ ಜಯಂತಿ | 12 | ಗುರುವಾರ |
| ಶ್ರೀಶಂಕರ ಜಯಂತಿ | 13 | ಶುಕ್ರವಾರ |
| ಏಕಾದಶಿ | 20 | ಶುಕ್ರವಾರ |
| ಶ್ರೀಬುದ್ಧ ಜಯಂತಿ | 23 | ಸೋಮವಾರ |